O.S. NO.100/2022

PW -1 .

Dated: 05-08-2024.

<u>ಸಾಕ್ಷಿಯನ್ನು ಈ ದಿನ ದಿನಾಂಕ 05-08-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .</u>

<u>ಮುಂದುವರೆದ ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎಸ್ ಎ ವಕೀಲರಿಂದಃ</u>

ನನ್ನ ಅಜ್ಜ ಯಲ್ಲಪ್ಪನಿಗೆ 5 ಜನ ಮಕ್ಕಳು ಅಂದರೆ ಶಿವಪ್ಪ, ರುದ್ರಪ್ಪ, ಗಂಗಪ್ಪ, ಬಸಪ್ಪ ಮತ್ತು ಅಣ್ಣಪ್ಪ. ಇವರಲ್ಲಿ ದೊಡ್ಡವರು ಶಿವಪ್ಪ. 2 ನೇ ಯವರು ರುದ್ರಪ್ಪ. 3 ನೇ ಯವರು ಗಂಗಪ್ಪ. 4 ನೇ ಯವರು ಅಣ್ಣಪ್ಪ ಮತ್ತು ಕೊನೆಯವರು ಬಸಪ್ಪ. ನಮ್ಮ ಅಜ್ಜ ಮೃತ ಪಟ್ಟನಂತರ ನಮ್ಮ ಕುಟುಂಬದ ಹಿರಿತನ ಶಿವಪ್ಪ ಮಾಡುತ್ತಿದ್ದರು. ಮೂಲತಃ ನಮ್ಮ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇದ್ದವು ಮತ್ತು ಅವು ಯಾವ ಯಾವ ಸರ್ವೆ ನಂಬರ ಎಂದು ಹೇಳಲು ಬರುವುದಿಲ್ಲ. ಶಿವಪ್ಪ ಕುಟುಂಬದ ಹಿರಿತನ ಮಾಡುವ ಸಮಯದಲ್ಲಿ ಕುಟುಂಬದ ಉತ್ಪನ್ನ ಎಷ್ಟು ಬರುತ್ತದೆ ಎಂದು ಬರೆದು ಇಡುತ್ತಿರಲಿಲ್ಲ. ಶಿವಪ್ಪಗೆ 5 ಜನ ಮಕ್ಕಳು. ರುದ್ರಪ್ಪನಿಗೆ 5 ಜನ ಮಕ್ಕಳು. ಗಂಗಪ್ಪನಿಗೆ 2 ಜನ ಮಕ್ಕಳು. ಅಣ್ಣಪ್ಪನಿಗೆ 4 ಜನ ಮಕ್ಕಳು. ಬಸಪ್ಪನಿಗೆ 3 ಜನ ಮಕ್ಕಳು ಇರುತ್ತಾರೆ. ಈ 5 ದಿನ ಮತ್ತು ಅವರ ಹೆಂಡತಿ ಮಕ್ಕಳು ಸೇರಿ ದೊಡ್ಡ ಕುಟುಂಬ ಎಂದರೆ ಸರಿ. ಹೀಗಾಗಿ ಹೊಲದ ಉತ್ಪನ್ನಗಳು ನಮ್ಮ ಕುಟುಂಬದ ಉಪಜೀವನಕ್ಕೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಪಾಲಿನಿಂದ ಬೇರೆಯವರ ಹೊಲ ಸಹ ಮಾಡುತ್ತಿದ್ದೇವು. ನಮ್ಮ ಕುಟುಂಬದ ಜಮಿನದಿಂದ ಬಂದ ಉತ್ಪನ್ನ ನಮ್ಮ ಹೊಟ್ಟೆ ಬಟ್ಟೆಗೆ ಸಕಾಗದೇ ಇದ್ದ ಕಾರಣ ನಾವು ಬೇರೆಯವರ ಹೊಲ ಪಾಲಿನಿಂದ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಜಮಿನದಿಂದ ಎಷ್ಟು ಉತ್ಪನ್ನ ಬರುತ್ತಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಮ್ಮ ಕುಟಕುಂಬದ ಜಮಿನದಿಂದ ಬಂದ ಉತ್ಪನ್ನ ಬಗ್ಗೆ

ಯಾರು ಬರವಣಿಗೆಯಲ್ಲಿ ಇಡುತ್ತಿರಲಿಲ್ಲ. ನಮ್ಮ ಕುಟುಂಬದ ಉತ್ಪನ್ನದಿಂದ ಯಾವುದೇ ಉಳಿತಾಯ ಆಗುತ್ತಿರಲಿಲ್ಲದಿದ್ದರೂ ಸಹ ಉಳಿತಾಯ ಆಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮದು ದೊಡ್ಡ ಕುಟುಂಬ ಇದ್ದಿದರಿಂದ ನಾವು ಬೇರೆಯವರ ಹೊಲ ಮಾಡುತ್ತಿದ್ದೇವು ಎಂದು ಸ್ವತಃ ನುಡಿದಿರುತ್ತಾರೆ. ನನ್ನ ತಂದೆ ಮತ್ತು ನನ್ನ ತಂದೆ ಸಹೊದರರು ಪ್ರತ್ಯೇಕವಾಗಿ ಬೇರೆಯವರ ಹೊಲವನ್ನು ಪಾಲಿನಿಂದ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಸಾಮಾಹಿಕವಾಗಿ ಮಾಡುತ್ತಿದ್ದರು. ಯಾರ ಯಾರ ಹೊಲಗಳ ಪಾಲಿನಿಂದ ಮಾಡುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಾನಾಗಲಿ ಮತ್ತು ನನ್ನ ತಂದೆಯಾಗಲಿ ಬೇರೆ ಯಾರದು ಹೊಲ ಪಾಲಿನಿಂದ ಮಾಡುತ್ತಿರಲಿಲ್ಲ ಹೀಗಾಗಿ ನನಗೆ ಹೊಲ ಪಾಲಿನಿಂದ ಕೊಟ್ಟವರ ಹೆಸರು ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ.

ಬಸಪ್ಪ ಇವರು ನಮ ಕುಟುಂಬದ ಹೊಲಗಳನ್ನು ಮಾಡುವುದಲ್ಲದೇ ಬೇರೆ ಯವರ ಹೊಲ ಪಾಲಿನಿಂದ ಮಾಡಿ ತನ್ನ ಸ್ವಂತ ದುಡಿಮೆಯಿಂದ ಹಣ ಉಳಿತಾಯ ಮಾಡಿಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ. ಬಸಪ್ಪ ಇವರು ಬೇರೆಯವರ ಹೊಲ ಪಾಲಿನಿಂದ ಮಾಡಿ ತನ್ನ ಸ್ವಂತ ಆದಾಯ ಮಾಡಿಕೊಳ್ಳುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಸಹ ಬೇರೆಯವರ ಹೊಲಗಳನ್ನು ಪಾಲಿನಿಂದ ಮಾಡಿ ತಮ್ಮ ಸ್ವಂತ ಉತ್ಪನ್ನ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಕೃಷಿಯಲ್ಲಿ ತುಂಬಾ ಅನುಭವಸ್ತರು ಇದ್ದು, ಹೊಸ ತಂತ್ರಜ್ಞಾನ ಉಪಯೊಗಿಸಿ ಕೃಷಿ ಮಾಡಿ ತುಂಬಾ ಸ್ವಂತ ಉತ್ಪನ್ನ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಪಟ್ಟಿ ಅಂಗಡಿ ಇಟ್ಟು ಕೊಂಡು ವ್ಯಾಪಾರ ಮಾಡುತ್ತಾ ಬಂದಿರುತ್ತೇನೆ, ನಾನು ಹೇಳುವಂತೆ ಕೃಷಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

O.S. NO.100/2022
PW –1 .
Dated: 05–08–2024.

4 ನೇ ಪ್ರತಿವಾದಿಯ ತವರು ಮನೆ ಖಾನಾಪೂರ ತಾಲೂಕಿನ ಗಂದೀಘವಾಡ ಎಂದರೆ ನಿಜ. 4 ನೇ ಪ್ರತಿವಾದಿ ಸಹೊದರರು ಇಂಜನಿಯಗಳು ಮತ್ತು ಒಳ್ಳೆಯ ಹುದ್ದೆಯಲ್ಲಿ ನೌಕರಿ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳ ಪೈಕಿ ಸರ್ವೆ ನಂ. 351/4 , ಸರ್ವೆ ನಂ. 42/1+2 ಬ/3, 42/3 ಕ ಮತ್ತು 42/3 ಡ, 293/2 ರ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ಸ್ವಂತ ದುಡಿಮೆ ಇಂದ ಬಂದ ಆದಾಯ ಮತ್ತು 4 ನೇ ಪ್ರತಿವಾದಿಯ ತವರು ಮನೆಯವರು ಮಾಡಡಿದ ಆರ್ಥಿಕ ಸಹಾಯದಿಂದ ಖರೀದಿ ಮಾಡಿರುವ ತಮ್ಮ ಸ್ವಂತ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ಹೀಗಾಗಿ ಖರೀದಿ ಪತ್ರಗಳು 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿ ಆಗಿದ್ದು, ಈಗಲೂ ಸಹಿತ ಅವರ ಹೆಸರಿನಲ್ಲಿ ಉತಾರಗಳು ಮುಂದುವದಿರುತ್ತವೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿಗಳ ಪೈಕಿ ಸರ್ವೆ ನಂ. 32/1 ರ ಆಸ್ತಿಯನ್ನು 1 ಮತ್ತು 2 ನೆ ಪ್ರತಿವಾದಿಗಳ ತಂದೆ ತಮ್ಮ ದುಡಿಮೆ ಬಂದ ಆದಾಯದಿಂದ ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಸರ್ವೆ ನಂ. 18/1 ರಲ್ಲಿ ಆಸ್ತಿ ಸಹ ಸದರಿ ಬಸಪ್ಪ ಇತನು ತನ್ನ ಸ್ವಂತ ದುಡಿಮೆ ಆದಾಯದಿಂದ 1 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿ ಮಾಡಿರುವಂತಹ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಎಲ್ಲ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ಅವು ನಮ್ಮ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ನಿಪಿ - 32 ರ ಮೂಲ ವಾಟ್ನಿ ಪತ್ರ ನನ್ನ ಹತ್ತಿರ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಿಪಿ - 32 ನ್ನು ಓದಿ ನೊಡಿರುತ್ತೇನೆ. ನಿಪಿ - 32 ರ ಪ್ರಕಾರ ಯಾರ ಯಾರಿಗೆ ಯಾವ ಯಾವ ಸರ್ವೆ ನಂಬರದಲ್ಲಿ ಎಷ್ಟು ಎಷ್ಟು ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ವಾದ ಪತ್ರದಲ್ಲಿ ಯಾರ ಯಾರಿಗೆ ಎಷ್ಟು ಎಷ್ಟು ಆಸ್ತಿಗಳು ಬಂದಿರುತ್ತವೆ ಎಂದು ಹೇಳಿ ಬರೆಸಿರುವುದಿಲ್ಲ. ನಿಪಿ - 32 ರಲ್ಲಿ ನಮ್ಮ ಕುಟುಂಬದ ಆಸ್ತಿಗಳಲ್ಲಿ ಯಾರ ಯಾರಿಗೆ ಎಷ್ಟು ಎಷ್ಟು ಹೊಗಿರುತ್ತದೆ ಎಂದು ನಮೂದಿರುತ್ತಾರೆ ಎಂರದರೆ ನಿಜ. ನಿಪಿ - 32 ರಲ್ಲಿ ಬರೆದಿರುವಂತಹ ಆಸ್ತಿಗಳು ಮಾತ್ರ ನಮ್ಮ ಕುಟುಂಬಕ್ಕೆ ಸಂಬಂದಪಟ್ಟ ಪಿತ್ರಾರ್ಜಿತ ಆಸ್ತಿಗಳು ಎಂದರೆ ನಿಜ. ನಿಪಿ - 32 ರಲ್ಲಿ ಗಂಗಪ್ಪ ಮತ್ತು ಅಣ್ಣಪ್ಪನಿಗೆ ಕಾಣಿಸಿದ ಆಸ್ತಿಯಷ್ಟೇ ನನ್ನ ತಂದೆಯವರಿಗೂ ಕಾಣಿಸಿರುತ್ತಾರೆ ಎಂದರೆ ನಿಜ. ಸರ್ವೆ ನಂ. 293/3 ರಲ್ಲಿ 20 ಗುಂಟೆ ಜಮಿನು ಪ್ರತಿವಾದಿ - 14 ಶೆಟ್ಟರ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ಬರೆದಿರುವ ಎಲ್ಲ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ವಾದ ಪತ್ರದ ಪ್ಯಾರಾ ನಂ. 5 ರಲ್ಲಿ ಪ್ರತಿವಾದಿ 14 ಸರ್ವೆ 293/3 ರಲ್ಲಿ 20 ಗುಂಟೆ ಖರೀದಿಸಿದ್ದರಿಂದ ಆತನನ್ನು ಪಕ್ಷಗಾರರನ್ನಾಗಿ ಮಾಡಿದ್ದು ಇರುತ್ತದೆ ಅಂತಾ ನಾನು ಹೇಳಿ ಬರೆಸಿರುವುದಿಲ್ಲ. ವಾಟ್ನಿ ಪತರದ ಪ್ರಕಾರ ವಾಟ್ನಿ ಆದ ನಂತರ ಪ್ರತಿವಾದಿ 14 ಇವರಿಗೆ 20 ಗಂಟೆ ಜಮಿನು ಮಾರಾಟ ಮಾಡಿದ ವಿಷಯ ಗೊತ್ತಿದ್ದರಿಂದ ಅದನ್ನು ವಾದ ಪತ್ರದಲ್ಲಿ ಬರೆಸಿದ್ದರೂ ಸಹಿತ ಬರೆಸಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 14 ಇವರು 20 ಗುಂಟೆ ಜವಿಮಿನು ಖರೀದಿ ಮಾಡಿದ ವಿಷಯ ಈ ಮೊದಲಿನ ಅಸಲು ದಾವಾ ಸಂಖ್ಯೆ 83/2017 ರಲ್ಲಿ ಸಹ ಕಾಣಿಸಿದ್ದರು ಎಂದರೆ ಸರಿಯಲ್ಲ. ನಿಪಿ - 32 ರ ಪ್ರಕಾರ ವಾಟ್ನಿ ಆದ ನಂತರ ನಮ್ಮ ನಮ್ಮ ಹಿಸ್ಸೆಗಳ ಜಮಿನುಗಳನ್ನು ಪ್ರತ್ಯೇಕವಾಗಿ ಕಬ್ಜಾ ವಹಿವಾಟು ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ತಮ್ಮ ತಮ್ಮ ಪ್ರತ್ಯೇಕ ಹಿಸ್ಸಾ ಜಮಿನುಗಳ ಮೇಲೆ ನನ್ನ ತಂದೆ ಮತ್ತು ನನ್ನ ತಂದೆ ಸಹೊದರರು ಪ್ರತ್ಯೇವಾಗಿ ಬ್ಯಾಂಕನಿಂದ ಸಾಲ ಪಡೆದಿರುತ್ತಾರೆ ಎಂದರೆ

O.S. NO.100/2022

PW -1 .

Dated: 05-08-2024.

ಸರಿ. ನಿಪಿ - 32 ರಲ್ಲಿ ಬರೆದಿರುವ ಎಲ್ಲ ಜಮಿನುಗಳು ಒಂದೇ ರೀತಿಯ ಫಲವತ್ತಾದ ಜಮಿನುಗಳು ಇರುವುದಿಲ್ಲ ಬೇರೆ ಬೇರೆ ಮಣ್ಣಿನ ಗುಣಧರ್ಮಗಳ ಜಮಿನುಗಳು ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ವಾಟ್ನಿ ಮಾಡುವಾಗ ಸುಮಾರು ಜಮಿನುಗಳು ಹಿಸ್ಸೆಯಲ್ಲಿ ಹೆಚ್ಚಿಗೆ ಹಂಚಿಕೆ ಮಾಡುತ್ತಾರೆ, ಫಲವತ್ತಾದ ಜಮಿನು ಕಡಿಮೆ ಬಂದಿರುತ್ತವೆ ಎಂದರೆ ನಿಜ. ನಿಪಿ -32 ರಲ್ಲಿ ನಮೂದಿಸಿದ ಜಮಿನುಗಳು ಮಣ್ಣಿನ ಫಲವತ್ತತೆ ಆಧಾರದ ಮೇಲೆ ಹಿಸ್ಸೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮನೆಗಳಲ್ಲಿ ಪಾಲು ವಿಭಾಗ ಯಾವಾಗ ಆಗಿರುತ್ತದೆ ಅಂತಾ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಸಂಬಂದ ಪಟ್ಟ ಮನೆ ಮತ್ತು ಹೊಲಗಳಲ್ಲಿ ಈಗಾಗಲೇ ವಾಟ್ನಿ ಆದರೂ ಸಹ ಮನೆಗಳಲ್ಲಿ ಮಾತ್ರ ವಾಟ್ನಿ ಆಗಿರುತ್ತದೆ ಹೊಲಗಳಲ್ಲಿ ಆಗಿರುವುದಿಲ್ಲ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ವಾಟ್ನ ಆಗಿರುತ್ತದೆ ಆದರೆ ಖೊಟ್ಟಿ ವಾಟ್ನಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಖೊಟ್ಟಿ ವಾಟ್ನಿ ಆಗಿರುತ್ತದೆ ಎಂದು ನಾನು ಪೊಲಿಸರಿಗೆ ದೂರು ವಗೈರೆ ಸಲ್ಲಿಸಿರುವುದಿಲ್ಲ. ನಿಪಿ - 32 ರ ಪ್ರಕಾರ ಮಂಜೂರಾದ ಡೈರಿ ಪ್ರಶ್ನಿಸಿ ನಾನು ಮೇಲ್ಮನವಿ ವಗೈರೆ ಸಲ್ಲಿಸಿರುವುದಿಲ್ಲ. 1 ನೇ ಮತ್ತು 2 ನೇ ಪ್ರತಿವಾದಿಗಳು ತಮ್ಮ ಸ್ವಂತ ದುಡಿಮೆಯಿಂದ ಆಸ್ತಿಗಳನ್ನು ಖರೀದಿ ಮಾಡಿದ್ದರಿಂದ ಅವರ ಮೇಲೆ ಇರುವ ಹೊಟ್ಟೆ ಕಿಚ್ಚಿಗೋಸ್ಕರ ಅವರು ಖರೀದಿ ಮಾಡಿದ ಆಸ್ತಿಗಳು ಸಹ ಒಟ್ಟು ಕುಟುಂಬದ ಆಸ್ತಿಗಳು ಅಂತಾ ಸುಳ್ಳು ಸಾಧಿಸಲು ಖೊಟ್ಟಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1, 2, 5 ಮತ್ತು 6 ಸೇರಿ ನನ್ನ ತಂದೆ ಮತ್ತು ಪ್ರತಿವಾದಿ 7 , 8 ಮತ್ತು 9 ರವರಿಗೆ ನೊಂದಾಯಿತ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಅದು ಖೊಟ್ಟಿ ಇರುತ್ತದೆ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರ ಪ್ರಕಾರ ಸರ್ವೆ ನಂ. 2/1+2 ಬ/2 ಕ್ಷೇತ್ರ 2 ಎಕರೆ 22 ಗುಂಟೆ ನಮ್ಮ ಪ್ರತ್ಯೇಕ ಕಬ್ಜಾ ವಹಿವಾಟು ಮಾಡುತ್ತಾ ಇದ್ದೇವೆ ಎಂದರೆ ಸರಿಯಲ್ಲ.

O.S. NO.100/2022

PW -1 .

Dated: 05-08-2024.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.